ಸಾಧ್ಯವಾದಷ್ಟು ಜನರಿಗೆ ಅನುಕೂಲವಾಗುತ್ತದೆ, ನೀರಾವರಿಗೆ ಅನುಕೂಲವಾಗುತ್ತದೆ ಎನ್ನತಕ್ಕಂಥ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಬಂದಿರತಕ್ಕಂಥ ನೀರನ್ನು ಲೋಪ ಆಗದಹಾಗೆ ಅಚ್ಚುಕಟ್ಟುದಾರರಿಗೆ ಅನುಕೂಲವಾಗುವಂಥ ವ್ಯವಸ್ಥೆಯನ್ನು ಮಾಡುತ್ತೇನೆ.

ರಾಜ್ಯ ಸರ್ಕಾರಿ ಅಂಗವಿಕಲ ನೌಕರರಿಗೆ ಬಡ್ತಿಯಲ್ಲಿ 5 ಪರ್ಸೆಂಟ್ ಮೀಸಲಾತಿ.

149 - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಮುಖ್ಯಮಂತ್ರಿಗಳು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೇಂದ್ರ ಸರ್ಕಾರದ ಅಂಗವಿಕಲ ನೌಕರರಿಗೆ ಶೇಕಡಾ 5 ರಷ್ಟು ಮುಂಬಡ್ತಿ ನೀಡಲು ಮೀಸಲಾತಿ ಇರುವುದು ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ, ಸದರಿ ಅವಕಾಶವನ್ನು ರಾಜ್ಯ ಸರ್ಕಾರದ ಅಂಗವಿಕಲ ನೌಕರಿಗೂ ನೀಡಲು ನಿಯಮಗಳಲ್ಲಿ ತಿದ್ದುಪಡಿ ಮಾಡಿ ಜಾರಿಗೆ ತರಲು ಸರ್ಕಾರ ಕ್ರಮಕೈಗೊಳ್ಳುವುದೇ.

ಇ) ಹಾಗಿದ್ದಲ್ಲಿ ಎಂದಿನಿಂದ ಜಾರಿಗೆ ತರಲಾಗುವುದು.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಬಿ. ಶಿವರಾಮು : ಸನ್ಮಾನ್ಯ ಅಧ್ಯಕ್ಷರೇ, ಉತ್ತರ ಇಲ್ಲ, ಉದ್ಭವಿಸುವುದಿಲ್ಲ ಎಂದು ಕೊಟ್ಟಿದ್ದಾರೆ. ಇಲ್ಲಿ ಸಪ್ಲಿಮೆಂಟರಿಗೆ ಅವಕಾಶವೇ ಇದ್ದ ಹಾಗೆ ಇಲ್ಲ. ಆದರೆ ಒಂದು ವಿಚಾರ ಕೇಂದ್ರ ಸರ್ಕಾರದಲ್ಲಿ ಮೀಸಲಾತಿ ಇಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೀರಿ. ಆದರೆ ಒಂದು ಸುತ್ತೋಲೆ ಪ್ರಕಾರ ಅವಕಾಶ ಇದೆ ಎನ್ನುವ ಒಂದು ಆಜ್ಞಾಪತ್ರ ಇಲ್ಲಿದೆ ಅದನ್ನು ತಮಗೆ ಕಳುಹಿಸಿಕೊಡುತ್ತೇನೆ. ಎರಡನೆಯದು ಅದು ಇದೆಯೋ ಇಲ್ಲವೋ, ಇಲ್ಲದಿದ್ದರೂ ಅಂಗವಿಕಲರಿಗೆ ಯಾವ ಯಾವ ಹುದ್ದೆಯನ್ನು ಬಡ್ತಿ ಮೂಲಕ ಒದಗಿಸಿದೆ ಅವರಿಗೆ ಅದು ನಿರ್ವಹಣೆ ಮಾಡಲಿಕ್ಕೆ ಶಕ್ತಿ ಇದೆ ಎನ್ನತಕ್ಕಂಥವರಿಗೆ ನಾವು ಅವಕಾಶವನ್ನು ಕಲ್ಪಿಸಿಕೊಟ್ಟರೆ ಏನು ತೊಂದರೆಯಾಗುತ್ತದೆ ಎಂದು ನಾನು ಸರ್ಕಾರವನ್ನು ಕೇಳಲಿಕ್ಕೆ ಇಚ್ಛಿಸಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಸಚಿವರು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ನಾಗರೀಕ ಸೇವಾ ಸಾಮಾನ್ಯ

ನೇಮಕಾತಿ ನಿಯಮ ಅದರ ಪ್ರಕಾರ 'ಸಿ' ಮತ್ತು 'ಡಿ' ಗುಂಪಿನ ಹುದ್ದೆಗಳಿಗೆ ನೇಮಕಾತಿ ಮಾಡತಕ್ಕಂಥ ಅವಕಾಶವನ್ನು ಕರ್ನಾಟಕ ರಾಜ್ಯ ಸರ್ಕಾರ ಒದಗಿಸಿಕೊಟ್ಟಿದೆ. ಹಿಂದೆ ನಮ್ಮ ಸರ್ಕಾರ ಇದ್ದರೆಂಥ ಸಂದರ್ಭದಲ್ಲಿಯೂ ಕೂಡ ಅದಕ್ಕೆ ಒಂದು ಪ್ರತ್ಯೇಕವಾದಂಥ ನಿರ್ದೇಶನಾಲಯವನ್ನು ಕೂಡ ಮಾಡಿಸಿ, ಇಲ್ಲಿಯವರೆಗೂ ಶೇಕಡ ನಾಲ್ಕರಷ್ಟು ಇದ್ದಂಥ ಮೀಸಲಾತಿಯನ್ನು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಈ ಒಂದು ಕಳೆದ ವರ್ಷದಲ್ಲಿಯೇ ಅದನ್ನು ಶೇಕಡಾ ಐದಕ್ಕೆ ಏರಿಸಿದೆ. ತಮ್ಮ ಪ್ರಶ್ನೆ ಇರತಕ್ಕಂಥದ್ದು ಪದೋನ್ನತಿ ಮಾಡುವಾಗ ಅಲ್ಲಿಯೂ ಕೂಡ ಅವರಿಗೆ ಮೀಸಲಾತಿಯನ್ನು ಕೊಡಬೇಕು ಎನ್ನತಕ್ಕಂಥದ್ದು. ಸರ್ವೋಚ್ಚ ನ್ಯಾಯಾಲಯದವರು ಮಂಡಲ್ ಆಯೋಗದ ವಿರುದ್ಧವಾಗಿ ಬಂದಿರತಕ್ಕಂಥ ಒಂದು ವಿಚಾರದಲ್ಲಿ ಗಣನೆಗೆ ತೆಗೆದುಕೊಂಡು ಬಂದಾಗ ಈ ರೀತಿಯಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡ ಇಷ್ಟಕ್ಕೆ ಮಾತ್ರ, ಅದಕ್ಕಿಂತ ಪೂರ್ವದಲ್ಲಿ ಅವರು ಈ ನಿಯಮಾವಳಿಗಳಲ್ಲಿ ಮೀಸಲಾತಿಯನ್ನು ಪ್ರಾರಂಭಿಕ ನೇಮಕಾತಿಯಲ್ಲಿ ಮಾಡಬಹುದೇ ವಿನಹ ಯಾವುದೇ ಸಂದರ್ಭದಲ್ಲಿ ಅವರಿಗೆ ಬಡ್ತಿಗಾಗಿ ಮೀಸಲಾತಿಯನ್ನು ಕೊಡತಕ್ಕಂಥದ್ದು ಸಾಧ್ಯವಿಲ್ಲ ಎಂಬಾದಮೇಲೆ ಭಾರತ ಸರ್ಕಾರದವರು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಬಡ್ತಿಯಲ್ಲಿಯೂ ಕೂಡ ಮೀಸಲಾತಿಯನ್ನು ಕೊಡಬೇಕು ಎಂದು ಹೇಳಿ ಸಂವಿಧಾನಕ್ಕೆ 16(4)ಕ್ಕೆ 'ಸಿ' ಎಂಬ ಉಪಬಂಧವನ್ನು ತಂದಿದ್ದರಿಂದ ಆ ತಿದ್ದುಪಡಿ ಮೂಲಕವಾಗಿ ಲಭ್ಯವಿದೆ. ಆದರೆ ಅಂಗವಿಕಲರಿಗೆ ಅದರಲ್ಲಿ ಅವಕಾಶ ಇಲ್ಲ. ಆದ್ದರಿಂದ ಮುಂಬಡ್ತಿಯಲ್ಲಿ ಮಾತ್ರ ಅವರಿಗೆ ನಾವು ಮೀಸಲಾತಿಯನ್ನು ಕೊಡಲಿಕ್ಕಾಗುವುದಿಲ್ಲ. ಉಳಿದಿರತಕ್ಕಂಥ ನೇಮಕಾತಿಯಲ್ಲಿ ಮೀಸಲಾತಿಯನ್ನು ಕೊಡುತ್ತೇವೆ.

ಶ್ರೀ ಡಿ.ಪಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೇ, ಇದೇ ಪ್ರಶ್ನೆಯನ್ನು ನಾನು 22.8.1995ಕ್ಕೆ ಕೇಳಿದ್ದೆ. ಕೇಳಿದಾಗ ಸನ್ಮಾನ್ಯ ಉಪ ಮುಖ್ಯಮಂತ್ರಿಯವರು ಕೇಂದ್ರ ಸರ್ಕಾರದ ಸರ್ಕ್ಯೂಲರನಲ್ಲಿ ಆ ರೀತಿ ಇಲ್ಲ ಎಂದು ಹೇಳಿದರು. ಒಂದು ವೇಳೆ ಅಂತಹದ್ದು ಇದ್ದರೆ ಅದನ್ನು ಪರಿಶೀಲಿಸಿ ಅದನ್ನು ಮಾಡುತ್ತೇನೆ ಎಂದು ಹೇಳಿದ್ದರು. ಈಗ ನನಗೆ ಭಾರತ ಸರ್ಕಾರದ ಸಿಬ್ಬಂದಿ ಸಾರ್ವಜನಿಕ ದೂರು ಮತ್ತು ಪಿಂಚಣಿ ಮಂತ್ರಾಲಯ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯ ಒಂದು ಜ್ಞಾಪನಾ ಪತ್ರ ಕೊಟ್ಟಿದ್ದು ಇದೆ. ಅದರಲ್ಲಿ ಪೂರ್ತಿಯಾಗಿ ಯಾರಿಗೆಲ್ಲಾ ಬಡ್ತಿ ಕೊಡುವಾಗ ಕೂಡ ಅದನ್ನು ಅನ್ವಯ ಮಾಡಬೇಕು ಎಂದು ಹೇಳುವ ಅಂಕಿ ಅಂಶಗಳ ಒಂದು ಆರ್ಡರ್ ನನ್ನ ಹತ್ತಿರ ಇದೆ. ಅದನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ಮಾನ್ಯ ಅಧ್ಯಕ್ಷರೇ, ಈಗಾಗಲೇ ತಾವೇ ಹೇಳಿದ್ದೀರಿ ಅಂತಹದ್ದು ಏನಾದರೂ ಇದ್ದರೆ ಕೊಡಿ ಎಂದು. ಆದಕಾರಣ ದಯವಿಟ್ಟು ಅದನ್ನು ಮಾಡಿ.

10.40 ಪಿ.ಎಂ.

ಅಧ್ಯಕ್ಷರು : ಇದರ ಜೊತೆಗೆ ಇನ್ನೊಂದು ಸಮಸ್ಯೆ ಇದೆ. ಒಬ್ಬ ವ್ಯಕ್ತಿ ಸರ್ಕಾರೀ ಸೇವೆಗೆ ಸೇರಿದಾಗ ಆತ ಚೆನ್ನಾಗಿರುತ್ತಾನೆ. ಆತ ಸೇವಾ ಅವಧಿಯಲ್ಲಿರುವಾಗ ಆತನಿಗೆ ಅಪಘಾತವೋ ಅಥವಾ ಮತ್ತಾವುದೋ ಅನಾಹುತಕ್ಕೆ ಸಿಕ್ಕಿ ಆತ ಪಾಯಂ ಆಗಿ ಅಂಗವಿಕಲತೆಗೆ ಒಳಗಾಗುತ್ತಾನೆ. ಆಗ ನೀವು do you transfer him to this category of physically handicaped people and

give him the benefits that a physically handicapped man is eligible?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಇದು ಬಹಳ ಸಂಕೀರ್ಣವಾದಂತ ಪ್ರಶ್ನೆಯಾಗಿದೆ. ಆತ ಮುಂದೆ ಸೇವಾ ನಿಯಮಾವಳಿಗಳ ನುಸಾರವಾಗಿ ಸೇರಿದಂಥ ಸಂದರ್ಭದ ನಂತರ ಅಪಘಾತಗಳಿಂದಲೋ ಅಥವಾ ಅನ್ಯ ಕಾರಣಗಳಿಂದ ಆತನಿಗೆ ಅಂಗವಿಕಲತ್ವ, ಊನತ್ವ ಬಂದರೆ ಅಂಥವುಗಳು ಈ ಕ್ಯಾಟಗರಿಯೊಳಗೆ ಬರುವುದಿಲ್ಲ. ಮಾಮೂಲಿಯಾಗಿ ಸಿಗತಕ್ಕಂಥ ಬಡ್ತಿಗಳು.

Mr. SPEAKER : But practically he is physically handicapped.

Sri M.P. PRAKASH : Practically he is a handicapped person invoking the provision under that reservation. He had joined the service under other category. Therefore, he cannot be transferred to the other category of the handicapped reservation. But here in this case, because of the Indira Sahni's case decided by the Supreme court, the Government of India has thought it fit of bringing an amendment to the Constitution, adding another proviso to the Article 16(4)(c). Therefore, there is no provision as such to give them the promotion in the reservation.

Mr. SPEAKER : But I would suggest to the begain Government to ponder over this proposition which I have placed before you.

ಶ್ರೀ ಎಂ.ಪಿ. ಪ್ರಕಾಶ್ : ಸರ್ಟನ್ಲಿ, ಅಧ್ಯಕ್ಷರೇ ನೀವು ಕೊಟ್ಟಿರುವುದು ಒಳ್ಳೆಯ ಸಲಹೆಯಾಗಿರುವುದರಿಂದ ಅದನ್ನು ಖಂಡಿತವಾಗಿಯೂ ಪರಿಗಣಿಸುತ್ತೇವೆ.

ಬೆಂಗಳೂರಿನ ಜಯನಗರ ಕ್ರೀಡಾಂಗಣ ಅಭಿವೃದ್ಧಿ

150 - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಬೆಂಗಳೂರು ಅಭಿವೃದ್ಧಿ ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಜಯನಗರ ಕ್ರೀಡಾಂಗಣವನ್ನು ಅಭಿವೃದ್ಧಿಗೊಳಿಸಲು 1995-96ನೇ ಸಾಲಿನಲ್ಲಿ ಸರ್ಕಾರ ಇಲ್ಲಿಯವರೆಗೆ ಏನು ಮಾಡಿರುವ ಹಣವೆಷ್ಟು?

ಆ) 1996ರ ಮಾರ್ಚಿಯೊಳಗೆ ಈ ಕೆಲಸಕ್ಕಾಗಿ ಎಷ್ಟು ಹಣವನ್ನು ವೆಚ್ಚ ಮಾಡಲು ಸರ್ಕಾರದವರು ಉದ್ದೇಶಿಸಿರುವರು?

ಶ್ರೀ ಆರ್. ರೋಷನ್ ಬೇಗ್ (ಬೆಂಗಳೂರು ಅಭಿವೃದ್ಧಿ ಮತ್ತು ವಕ್ಫ್ ರಾಜ್ಯ ಸಚಿವರು) :